ಬಾಟಲುಗಳಿಗೆ ಅವರವರು ಕೇಳಿದ ಅತ್ತರನ್ನು ಮುದದಿಂದ ಮಾತನಾಡುತ್ತಲೇ ತುಂಬಿಕೊಡುತ್ತಾನೆ ಚತುರ ವ್ಯಾಪಾರಿ. ಮಾತಿನಲ್ಲಿ ಸಡಗರ ತುಂಬಿಕೊಂಡು ಗಿರಾಕಿಗಳಿಗೂ ಸಂಭ್ರಮ ಹಂಚುತ್ತಾನೆ. ಕೊಳ್ಳುವವರ ಮುಂಗೈಗಳಿಗೆಲ್ಲ ಸಣ್ಣ ಸ್ಪಂಜಿನಿಂದ ಇಷ್ಟಿಷ್ಟು ಅತ್ತರು ಬಳಿಯುತ್ತಾನೆ.

''ಕೊಳ್ಳದಿದ್ದರೂ ಪರ್ವಾಗಿಲ್ಲ, ನಾನು ಚೂರು ಹಚ್ಚಿರುವ ಈ ಅತ್ತರನ್ನೇ ಮೂಸಿ ಮೂಸಿ ಇವೊತ್ತು ಇಡೀ ದಿನ ನನ್ನನ್ನು ನೆನಪಿಸಿಕೊಳ್ಳುತ್ತೀರಿ...'' ನಗುತ್ತಾನೆ ಮುಖದ ತುಂಬಾ. ''ಅರೆ, ನೀನು ಹದಿನೈದು ದಿನಗಳ ಹಿಂದಿನ ಭಾನುವಾರ ಹುಸೇನ್ ಸಾಗರದ ಬಳಿ ಅತ್ತರು ಮಾರುತ್ತಿದ್ದೆಯಲ್ಲಾ. ಅಲ್ಲೂ ಇಂಥದ್ದೇ ಮಾತುಗಳನ್ನಾಡಿ ಜನರನ್ನು ಬೆರಗುಗೊಳಿಸುತ್ತಿದ್ದೆ. ತುಂಬಾ ಕಿಲಾಡಿ ಇದ್ದೀಯ ನೀನು'' ಗಿರಾಕಿಯೊಬ್ಬ ಅತ್ತರು ಕೊಳ್ಳುತ್ತಾ ಹೇಳಿದ್ದ. ''ಹೋದ ವಾರ ಗೋಲ್ಕೊಂಡದ ಬಳಿ ನೀನು ಅತ್ತರು ಮಾರುವುದನ್ನು ನೋಡಿದ್ದೆ...'' ಇನ್ನೊಬ್ಬ ಮೊದಲನೆಯವನ ಮಾತಿಗೆ ತನ್ನ ಮಾತು ಸೇರಿಸಿದ್ದ. ಅತ್ತರು ಮಾರುವ ಹುಡುಗ ಈಗ ನಗುತ್ತಾ, ''ಹೌದು, ಹೌದು, ಹಂಡ್ರೆಡ್ ಪರ್ಸೆಂಟ್ ಅದು ನಾನೇ. ಅತ್ತರು ಎಲ್ಲರಿಗೂ ಬೇಕಲ್ಲ? ಈ ಚಾರ್ಮಿನಾರು, ಗೋಲ್ಕೊಂಡ ಅಲ್ಲದೆ ಹುಸೇನ್ ಸಾಗರ, ಬಿರ್ಲಾ ಮಂದಿರ, ಸಾಲಾರ್‌ಜಂಗ್ ಮ್ಯೂಸಿಯಂ, ನೆಹರೂ ಪಾರ್ಕ್, ರವೀಂದ್ರ ಭಾರತಿ ಹತ್ತಿರವೂ ನಾನು ಅತ್ತರು ಮಾರ್ತೀನಿ. ಆದ್ರೆ ನಂಗೆ ಜಾಸ್ತಿ ಗಿರಾಕಿಗಳು ಇರೋದು ಮಾತ್ರ ಚಾರ್ಮಿನಾರು, ಗೋಲ್ಕಂಡ ಹತ್ತಿರವೇ... ಯಾಕಂದ್ರೆ ಈ ಚಾರ್ಮಿನಾರ್ ಅನ್ನು ಕಟ್ಟಿಸಿದ್ದು ಮತ್ತು ಗೋಲ್ಕೊಂಡವನ್ನು ಆಳಿದ್ದು ನನ್ನ ಮುತ್ತಾತನ ತಾತಂದಿರಂತೆ...'' ಎಂದು ಮೀನಾರಿನ ಕಡೆಗೊಮ್ಮೆ ನೋಡಿ ಅವನು ನಗುತ್ತಾನೆ. ಅವನ ಮಾತು ಕೇಳಿ ಪಕ್ಕದಲ್ಲಿನ ಜ್ಯೂಸ್ ಅಂಗಡಿಯ ಯಜಮಾನ, ''ಅರೆ, ಸಲೀಂ ನೀನು ಬಲು ರಂಗೀಲ ಇದ್ದೀಯೋ ಹುಡ್ಗ. ಸುಳ್ಳನ್ನು ಸತ್ಯದ ತಲೆ ಮೇಲೆ ಹೊಡೆದಂತೆ ಹೇಗೆ ಹೇಳ್ತಿದ್ದೀಯ ನೋಡು. ಇಷ್ಟಕ್ಕೂ ನಿನ್ನ ತಾತನ ಹೆಸರು ಗೊತ್ತಿದ್ರೆ ಹೇಳು. ಕೇಳುವವರಿದ್ದರೆ ರಾಮೋಜಿ ಫಿಲ್ಮ್ ಸಿಟೀನು ನಂದೆ ಅಂತೀಯ ನೀನು...'' ನಗುತ್ತಲೇ ಛೇಡಿಸಿದ್ದ. ಕೂಡಲೇ ಅತ್ತರು ಮಾರುವ ಹುಡುಗ, ''ಅರೆ, ಜಹಂಗೀರ್ ಚಾಚಾ ನಿನಗೆ ನಾನು ಸುಲ್ತಾನ್ ವಂಶಕ್ಕೆ ಸೇರಿದವನೆಂದು ಹೊಟ್ಟೆ ಉರಿ ಅಲ್ಲವಾ? ಐಸ್ ಹಾಕಿ ಒಂದು ದೊಡ್ಡ ಗ್ಲಾಸ್ ನಿಂಬೆ ಹಣ್ಣಿನ ಶರಬತ್ತು ಮಾಡಿಕೊಂಡು ಕುಡಿ, ಹೊಟ್ಟೆ ತಣ್ಣಗಾಗುತ್ತದೆ...'' ಎಂದು ಉತ್ತರಿಸಿದ್ದ. ಇಬ್ಬರ ಮಾತುಗಳಿಂದ ಅಲ್ಲಿದ್ದವರೆಲ್ಲ ನಕ್ಕಿದ್ದರು. ಅತ್ತರು ಮಾರುವ ಆ ಹುಡುಗ ಮತ್ತು ಶರಬತ್ತು ಮಾರುವ ಆ ಚಾಚಾ ಇಬ್ಬರೂ ಬೆಸ್ಟ್ ಫ್ರೆಂಡ್ಸ್, ಒಂಥರಾ ತಾತ ಮೊಮ್ಮಗ ಇದ್ದಂತೆಯೇ ಸರಿ. ಅತ್ತರು ಕೊಳ್ಳಲು ಬಂದವರಲ್ಲಿ ಕೆಲವರು ಶರಬತ್ತು ಕುಡಿದೂ ಹೋಗುವುದುಂಟು. ಹಾಗೆಯೇ ಶರಬತ್ತು ಕುಡಿಯಲು ಬಂದವರಲ್ಲಿ ಕೆಲವರು ಅತ್ತರನ್ನೂ ಖರೀದಿಸಿ ಹೋಗುವುದುಂಟು. ವಾರಕ್ಕೊಮ್ಮೆಯಾದರೂ ಪ್ಯಾರಡೈಸ್‌ನಿಂದ ಒಂದು ಫುಲ್ ಬಿರಿಯಾನಿ ತರಿಸಿ ಇಬ್ಬರೂ ಹಂಚಿಕೊಂಡು ತಿನ್ನುವುದುಂಟು.

ಹಾಗೆ ನೋಡಿದರೆ, ಅತ್ತರು ಮಾರುವ ಹುಡುಗ ಸಲೀಮನೂ ಶರಬತ್ತು ಮಾರುವ ಜಹಂಗೀರ್ ಚಾಚಾನೂ ಚಾರ್ಮಿನಾರ್ ಬಳಿಯ ಗಲ್ಲಿಯಲ್ಲಿರುವ ಒಂದೇ ವಠಾರದ ಪುಟ್ಟ ಪುಟ್ಟ ಮನೆಗಳಲ್ಲಿ ವಾಸವಿರುವವರೇ ಆಗಿದ್ದಾರೆ. ಇನ್ನೂ ಹೇಳಬೇಕೆಂದರೆ ಒಂದೇ ದೋಣಿಯ ಪಯಣಿಗರೂ ಕೂಡ. ಚಾಚಾನ ಮೂವರು ಗಂಡು ಮಕ್ಕಳೂ ಇಪ್ಪತ್ತು ವರ್ಷಗಳ ಹಿಂದೆಯೇ ದುಡಿಯಲೆಂದು ಸೌದಿಗೆ ಹೋದವರು ವಾಪಸ್ಸಾಗದೆ ಮದುವೆಯಾಗಿ ಅಲ್ಲೇ ಝಾಂಡ ಊರಿದ್ದಾರೆ. ಚಾಚಾನಿಗೆ ಅವರ ಅಡ್ರೆಸ್ಸಾಗಲೀ, ಫೋನ್ ನಂಬರುಗಳಾಗಲೀ ಗೊತ್ತಿಲ್ಲ. ಅವನು ಹೆಂಡತಿ ಮತ್ತು ಮಗಳ ಜೊತೆಗಿದ್ದಾನೆ. ಶರಬತ್ತು ವ್ಯಾಪಾರದಲ್ಲಿ ಜೀವನ ಸಾಗುತ್ತಿದೆಯಲ್ಲದೆ ಮಗಳ ಮದುವೆಗೆ ಜಹಂಗೀರ್ ಚಾಚಾ ಸುಮಾರಾಗಿ ಕೂಡಿಟ್ಟು, ಗಂಡನ್ನು ತಲಾಶು ಮಾಡುವ ಕೆಲಸದಲ್ಲೂ ತೊಡಗಿದ್ದಾನೆ. ಇನ್ನು ಅತ್ತರು ದುಖಾನಿನ ಸಲೀಮನ ಅಪ್ಪ ಚಾರ್ಮಿನಾರಿನ ಬಳಿ ಬಣ್ಣ ಬಣ್ಣದ ಬಲೂನುಗಳನ್ನು ಮಾರುತ್ತಿದ್ದಾತ.